<u>ದಿನಾಂಕಃ**23-09-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.**</u>

<u>ಪಾಟೀ ಸವಾಲುಃ **2** ನೇ ಎದುರುದಾರರ ಪರ ಶ್ರೀ ಎಸ್ ಹೆಚ್ ವಕೀಲರಿಂದಃ</u>

1. ನನಗೆ ಕನ್ನಡ ಓದಲು ಬರುತ್ತದೆ. 2 ನೇ ಅರ್ಜಿದಾರಳು ಎಂ.ಎಸ್ಸಿ. ಸ್ನಾತಕೋತ್ತರ ಪದವೀಧರಳು ಇರುತ್ತಾಳೆ. 3 ನೇ ಅರ್ಜಿದಾರನು ಎಂಬಿಎ ಪದವೀಧರ ಇರುತ್ತಾರೆ. 2 ನೇ ಅರ್ಜಿದಾರಳು ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ. 3 ನೇ ಎದುರುದಾರ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ಗಂಡ ತಾಲ್ಲೂಕು ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ನಿವೃತ್ತಿಯಾದ ನಂತರ ಅವರಿಗೆ ನಿವೃತ್ತಿ ವೇತನ ಬರುತ್ತಿತ್ತು ಎಂದರೆ ಸರಿ . ನನ್ನ ಗಂಡ ತೀರಿಕೊಂಡ ನಂತರ ಅವರ ಪಿಂಚಣಿ ನನಗೆ ಬರುತ್ತಿದೆ ಎಂದರೆ ಸರಿ . ನನ್ನ ಗಂಡ ತೀರಿಕೊಂಡ ಕಾರಣ ನನಗೆ ಪಿಂಚಣಿ ಬರುತ್ತಿದ್ದು ಆರ್ಥಿಕ ಸಮಸ್ಯೆ ಇರುವುದಿಲ್ಲ ಎಂದರೆ ಸಾಕ್ಷಿ ಪಿಂಚಣಿ ಬರುತ್ತಿದೆ, ಆದರೆ ಆರೋಗ್ಯ ಸಮಸ್ಯೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ.

2. ನನ್ನ ಗಂಡ ನಿವೃತ್ತಿಯಾದ ನಂತರ ಅವರ ಆರೋಗ್ಯ ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸುವ ಕಾಲಕ್ಕೆ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸ್ ಅಧಿಕಾರಿಗಳು ಏನೇನು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ದಾಖಲೆ ನೋಡಿರುತ್ತೇನೆ, ಆದರೆ ಹೇಳಲು ಬರುವುದಿಲ್ಲ. ನನ್ನ ಅರ್ಜಿಯಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಪಡಿಸಿದ ಬೈಕನ್ನು 1 ನೇ ಎದುರುದಾರ ಶಿವಮೊಗ್ಗದಿಂದ ತೆಗೆದುಕೊಂಡು ಬಂದು ನನ್ನ ಗಂಡನಿಗೆ ಢಿಕ್ಕಿಪಡಿಸಿರುತ್ತಾರೆ. ಸದರಿ ಬೈಕನ್ನು 1 ನೇ ಎದುರುದಾರ ಯಾರ ಕಡೆಯಿಂದ ತೆಗೆದುಕೊಂಡು ಬಂದಿರುತ್ತಾರೆ ಎಂದು ನಾನು ತನಿಖಾದಿಕಾಯಿಯನ್ನು ಕೇಳಿರುವುದಿಲ್ಲ. ನಿಪಿ 9 ಮತ್ತು 10 ರಲ್ಲಿ ಒಟ್ಟು 4 ಜನ ಆರೋಪಿತರ ಹೆಸರನ್ನು ನಮೂದು

ಮಾಡಿರುತ್ತಾರೆ ಎಂದರೆ ಸರಿ. ಸದರಿ ಈ ಅರ್ಜಿಯಲ್ಲಿ ತಾಫಿಕ್, ಚಂದನ್ ಕುಮಾರ್ ಮತ್ತು ಸಿರಾಜುದ್ದೀನ್ ಇವರನ್ನು ಪಕ್ಷಗಾರರನ್ನಾಗಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ವ್ಯಕ್ತಿಗಳನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನ್ನದು ಯಾವುದೇ ಅಭ್ಯಂತರ ಇರುವುದಿಲ್ಲ. 1 ನೇ ಎದುರುದಾರರು ಬೈಕಿನ ನಂಬರ್ ಪ್ಲೇಟನ್ನು ಬದಲಾಯಿಸಿಕೊಂಡು ಚಲಾಯಿಸುತ್ತಿದ್ದು ಸರಿದ ಬೈಕು ಯಾರಿಗೆ ಸಂಬಂಧಪಟ್ಟಿದ್ದು ಎಂದು ನಾನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ .

3. 2021 ರಲ್ಲಿ ಅಪಘಾತಪಡಿಸಿದ ಬೈಕನ್ನು ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ಪೊಲೀಸರು ನಮಗೆ ತಿಳಿಸಿದ್ದರು ಎಂದರೆ ಸರಿ. ದಿನಾಂಕಃ15.01.2021 ರಂದು 2 ನೇ ಎದುರುದಾರರು ಬೈಕನ್ನು ತೆಗೆದುಕೊಂಡು ಮನೆಗೆ ಊಟಕ್ಕೆ ಹೋದಾಗ ಸದರಿ ಬೈಕನ್ನು ಕಳ್ಳತನ ಮಾಡಿರುವ ಬಗ್ಗೆ ಪೊಲೀಸರು ಹೇಳಿದ್ದು ಆದರೆ ಅದರ ಬಗ್ಗೆ ನಮಗೆ ಗೊತ್ತಿರುವುದಿಲ್ಲ. 2021-22 ರಲ್ಲಿ ಲಾಕ್ ಡೌನ್ ಆಗಿದ್ದು ಆ ಕಾಲಕ್ಕೆ 2 ನೇ ಎದುರುದಾರರು ಠಾಣೆಗೆ ಹೋಗಿ ಬೈಕ್ ಕಳ್ಳತನ ಆಗಿರುವ ಬಗ್ಗೆ ಮೊದಲು ಮೌಖಿಕವಾಗಿ ಆ ನಂತರ ಲಿಖಿತವಾಗಿ ದೂರು ಕೊಟ್ಟಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಹೊನ್ನಾಳಿ ಪೋಲೀಸರು ಠಾಣಾ ಗುನ್ನಾ ಸಂಖ್ಯೆ 255/2021 ರಲ್ಲಿ ತನಿಖೆ ಕೈಗೊಂಡಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ. ಅಪಘಾತ ಪ್ರಕರಣದಲ್ಲಿ ತನಿಖೆಯ ವೇಳೆ ಪೊಲೀಸರು ಹೊನ್ನಾಳಿ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ಬಗ್ಗೆ ನಮಗೆ ಹೇಳಿರುವುದಿಲ್ಲ. ಪೊಲೀಸರು ತನಿಖೆಯ ಕಾಲಕ್ಕೆ ಬೈಕಿನ ನಂಬರ್ ಪ್ಲೇಟನ್ನು ಬದಲಾವಣೆ ಮಾಡಿ ಬೈಕ್ ತೆಗೆದುಕೊಂಡು ಬಂದಿರುವ ವಿಚಾರವನ್ನು ಹೇಳಿರುತ್ತಾರೆ ಎಂದರೆ ಸರಿ. ಬೈಕಿನ ಚಾಸಿ ನಂಬರ್ ಮತ್ತು ಇಂಜಿನ್ ನಂಬರನ್ನು ತೆಗೆದುಕೊಂಡು ಬೈಕಿನ ಮಾಲೀಕರು ಹೊನ್ನಾಳಿಯಲ್ಲಿ ಇರುತ್ತಾರೆ ಎಂದು ಪೊಲೀಸರು ತಿಳಿಸಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಪೊಲೀಸರು ಅವರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ .

4. ಕಳ್ಳತನ ಆಗುವ ಕಾಲಕ್ಕೆ ಸದರಿ ಬೈಕಿಗೆ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಅಪಘಾತ ಆಗುವ ಕಾಲಕ್ಕೆ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿಯಲ್ಲ. 15.01.2021 ರಿಂದ ಅಪಘಾತ ಆಗುವ ವರೆಗೆ ಬೈಕನ್ನು ಕಳ್ಳತನ ಮಾಡಿಕೊಂಡು ಹೋದ ಕಾರಣ ಚಂದನ್, ತೌಫಿಕ್ ಮತ್ತು ಅಬ್ದುಲ್ ನಾಸಿರ್ ಇವರ ಸುಪರ್ದಿಯಲ್ಲಿ ಬೈಕ್ ಇತ್ತು ಎಂದರೆ ಸರಿ . ಸದರಿ ಬೈಕ್ ಕಳ್ಳತನ ಆದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿ ಅಪಘಾತ ಪ್ರಕರಣದಲ್ಲಿ 3 ಜನರ ವಿರುದ್ದ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು ಅವರು ಈ

ಅರ್ಜಿಯಲ್ಲಿ ಅವಶ್ಯಕ ಪಕ್ಷಗಾರರು ಇದ್ದರೂ ಸಹ ಅವರನ್ನು ಈ ಅರ್ಜಿಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರರ ಮೇಲೆ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಸಿ ಪ್ರಕರಣ ಸಂಖ್ಯೆ 33/2025 ರಂತೆ ಪ್ರಕರಣ ಈ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

<u>ಮರು ವಿಚಾರಣೆ ಃ ಇಲ್ಲ ಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿ ಃ